## ಕಟ್ಟುಗಳು ಬದಲಾಗುತ್ತವೆ

ಬಹಳಷ್ಟು ಎಲೆಗಳ 'ಕಟ್ಟು'ಗಳು ಇಲ್ಲಿ ಬದಲಾಗುತ್ತವೆ. ಆಟಗಳು ನಡೆಯುತ್ತಲೇ ಇರುತ್ತವೆ! ಲಕ್ಷಾಂತರ ರೂಪಾಯಿ ಕೈಬದಲಾಗುತ್ತದೆ. ಕೆಲವೆಡೆ, ಹುಣಸೆಹಣ್ಣಿನ ಬೀಜಗಳನ್ನು ಬಿಡಿಸಿಯೋ, ತೇಯ್ದೋ... ಸಿದ್ಧಪಡಿಸಿದ 'ಪಚ್ಚಿ'ಗಳಿಂದಲೇ ಆಟ ನಡೆಯುತ್ತದೆ. ಅದೊಂದು ಮೋಜು, ಮಜಾ, ಮಸ್ತಿಯೊಂದಿಗೆ ಕೆಲವರಿಗೆ 'ಚಟವೂ' ಹೌದು!

ಪೆಂಡಾಲ್ ಹಾಕಿ, ಚಾಪೆಯೋ, ಟಾರ್ಪಲಿನ್ನೋ, ನೆಲಹಾಸು ಹಾಸಿಯೋ ಅಥವಾ ಕುರ್ಚಿ–ಟೇಬಲ್‌ಗಳನ್ನಿಟ್ಟು ಆಟ 'ನಡೆಸುವ'ವನಿಗೆ, ನೀರು, ಬೀಡಿ, ಸಿಗರೇಟು, ಅಲ್ಲಲ್ಲಿ ಊಟ–ಉಪಾಹಾರ ಪೂರೈಸುವವನಿಗೆ ಆಟಕ್ಕೆ ಅಥವಾ ಇಸ್ಪೀಟ್ ಎಲೆಗಳ 'ಕಟ್ಟೆ'ಗಿಷ್ಟು 'ಇನಾಮು' ಕಡ್ಡಾಯವಾಗಿ ಕೊಡಲೇಬೇಕು.

ಇಲ್ಲಿ ಸೋಲುವವರೆಷ್ಟೋ, ಗೆಲ್ಲುವವರೆಷ್ಟೋ... ಬೂದಿಯಾಗುವ ಬೀಡಿ–ಸಿಗರೇಟುಗಳೆಷ್ಟೋ...? ಈಗ ಹೋಗೋಣ, ಆಮೇಲೆ ಹೋಗೋಣ ಎಂದು ಕೂರುವವರೆಷ್ಟೋ, ಆಟ ಮುಂದುವರಿಸುವವರೆಷ್ಟೋ... ಒಂದಿಷ್ಟು ಹಣ ಬರುತ್ತಿದ್ದಂತೆಯೇ ಇಲ್ಲಿಗೆ ಸಾಕು ಎದ್ದು ಹೋಗೋಣ ಎಂದುಕೊಂಡರೆ 'ಮತ್ತಷ್ಟು ಬಂದೀತೆಂಬ ಆಸೆ'ಯು ತಡೆಯುವುದೇನೋ...?

ಯುಗಾದಿ ಹಬ್ಬದ ಆಸುಪಾಸಿನಲ್ಲಿ ನಡೆಯುವ ಈ ಇಸ್ಪೀಟ್ ಜೂಜಾಟ ಆರಂಭವಾಗಿದ್ದು ಹೇಗೆ ಎಂಬುದಕ್ಕೆ ಸ್ಪಷ್ಟ ಉತ್ತರವಿಲ್ಲ. ಆದರೆ, ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎನ್ನುತ್ತಾರೆ ಊರುಗಳ ಹಿರಿಯರು. ಅದು ಇಂದಿಗೂ ಮುಂದುವರಿಯುತ್ತಲಿದೆ.

ಆ ಭಾಗದ ಠಾಣೆಗಳ ಪೊಲೀಸರ ಕಟ್ಟುನಿಟ್ಟಿನ ಎಚ್ಚರಿಕೆಯ ನಡುವೆಯೂ ನಿಂತಿಲ್ಲ. ಅಲ್ಲಲ್ಲಿ ಪೊಲೀಸರಿಂದ ದಾಳಿಗಳು, ಕಾರ್ಯಾಚರಣೆಗಳು ನಡೆದರೂ... 'ಹಬ್‌ವಲ್ವಾ ಸಾ... ಇವತ್ತೊಂದ್ ದಿನ ಆಡ್ಕತಿವಿ ಬಿಡಿ ಸಾ... ನೀವೂ ಬನ್ನಿ ಸಾ ಆಡವ' ಎಂಬ ವಿನಾಯಿತಿ ಕೋರಿಕೆಯ ಮಾತುಗಳೂ ಹಳ್ಳಿಗಳಲ್ಲಿ ಕೇಳಿಬರುತ್ತಲೇ ಇರುತ್ತವೆ. ಹಾಗೇನಾದರೂ ಪೊಲೀಸರು ಈ ಸಂದರ್ಭದಲ್ಲಿ ಪ್ರಕರಣ ದಾಖಲಿಸುತ್ತಾ ಹೋದರೆ... ಪ್ರಕರಣಗಳ ಸಂಖ್ಯೆ ಸಾವಿರಾರಾದೀತು!

ಈ ಇಸ್ಪೀಟ್ ಜೂಜಾಟ ಗೆದ್ದುಕೊಂಡವರಿಗೆ ವರ, ಸೋತುಹೋಗುವ ಬಹುತೇಕರಿಗೆ ಶಾಪವೇ... ಹೊಲ, ಮನೆ, ಆಸ್ತಿಪಾಸ್ತಿ ಮಾರಿಕೊಂಡು ಬೀದಿಗೆ ಬಿದ್ದವರ ಉದಾಹರಣೆಗಳೂ ಸಾಕಷ್ಟಿವೆ. 'ಇಸ್ಪೀಟ್‌ನಿಂದ ಬಂದ ಹಣದಿಂದ ಏಳಿಗೆ ಆಗುವುದಿಲ್ಲ' ಎಂಬ ಮಾತುಗಳೂ ಹಳ್ಳಿಗಳಲ್ಲಿ ಜನಜನಿತ. ಆದರೂ ಜೂಜಾಟದ ಮೋಜನ್ನು ಅವರು ನಿಲ್ಲಿಸುವುದಿಲ್ಲ. ಯುಗಾದಿ ನೆಪದಲ್ಲಿ ಒಂದ್ ಕೈ ನೋಡೇಬಿಡೋಣ ಎಂದು ಕುಳಿತೇ ಬಿಡುತ್ತಾರೆ. ಈ ಆಟದಲ್ಲಿ ಸಾಲಗಾರರಾಗುವವರೆಷ್ಟೋ? ಪೊಲೀಸರ ಕಣ್ತಪ್ಪಿಸಿ ಆಡುವ ಚಮತ್ಕಾರ ಈ 'ಆಟಗಾರರಿಗೆ' ಚೆನ್ನಾಗಿಯೇ ಸಿದ್ಧಿಸಿದೆ! ಇದರಲ್ಲಿ ಗಳಿಸುವವರಿಗಿಂತ ಕಳೆದುಕೊಳ್ಳುವವರೇ ಹೆಚ್ಚು ಎಂದು ಗೊತ್ತಿದ್ದರೂ ಆಡುತ್ತಾರೆ.

## ಜೂಜಾಟವಾದ ಬಗೆ...

ಇಸ್ಪೀಟಾಟ ಕ್ರಮೇಣ ಜೂಜಾಟದ ಸ್ವರೂಪ ಪಡೆದುಕೊಂಡೇ ಬಿಟ್ಟಿದೆ. ಬದಲಾದ ಕಾಲಘಟ್ಟದಲ್ಲಿ 'ರಂಜನೆ'ಗಾಗಿ 'ಕಾಸು'ಗಳನ್ನು ಪಣಕ್ಕಿಟ್ಟು ಆಡುತ್ತಿದ್ದ ಪೊರೆ ಮತ್ತು ರಮ್ಮಿಯ ಇಸ್ಪೀಟಾಟ 'ನೋಟು'ಗಳ ಕಂತೆಯನ್ನೇ ಇಟ್ಟು–ಬಾಜಿ ಕಟ್ಟಿಕೊಂಡು ಆಡುವ ಜೂಜಾಟವಾಗಿ ರೂಪಾಂತರಗೊಂಡಿದೆ. 'ಅಂದರ್‌ಬಾಹರ್' ಸ್ವರೂಪದಲ್ಲಿ ಜೂಜಾಗಿ ಪರಿವರ್ತನೆಯಾಗಿದೆ.

ಕೆಲಸದ ಕಾರಣದಿಂದ ಬೆಂಗಳೂರು, ಮೈಸೂರು ಮೊದಲಾದ ನಗರಗಳಲ್ಲಿ ಇರುವ ಕೆಲವರು ಕುಟುಂಬ ಸಮೇತವಾಗಿ ಊರಿಗೆ ಬರುವ ಹಬ್ಬವೂ ಇದು. ಹೀಗೆ ಬಂದವರಲ್ಲಿ ಹಿರಿಯರು, ಹೆಚ್ಚಿನ ಪ್ರಮಾಣದಲ್ಲಿ ಯುವಜನರು ಹಣವನ್ನು ಕಟ್ಟಿಕೊಂಡು ಜೂಜಿಗೆ ಇಳಿಯುತ್ತಾರೆ. ನೋಟುಗಳನ್ನು ಕೈಯಲ್ಲಿ ಹಿಡಿದುಕೊಂಡು ಅಥವಾ ಮುಂದೆ ಹರಡಿಕೊಂಡು ಕುಳಿತುಬಿಟ್ಟರೆ ಹೊತ್ತು ಸರಿಯುವುದೇ ತಿಳಿಯುವುದಿಲ್ಲ. ಆಟಕ್ಕೆ ಒಳಗಾದ ಹಣವೆಲ್ಲಾ ಬೆವರಿನಿಂದ ಮಸುಕಾಗಿ ಹೋಗಿರುತ್ತವೆ!

''ಹಬ್ಬದ ಮುನ್ನಾ ದಿನದಿಂದಲೇ 'ಇಸ್ಪೀಟ್ ಆಟ' ಶುರುವಾಗುತ್ತದೆ. ಕಳೆದೊಂದು ದಶಕದಿಂದೀಚೆಗೆ 'ಬಂಗಡಿ'ದಾರರು (ಆಟಕ್ಕೆ ವ್ಯವಸ್ಥೆ ಮಾಡುವವರು) ಶಾಮಿಯಾನ, ಟೇಬಲ್, ಚೇರ್, ಫ್ಯಾನ್, ತಿಂಡಿ, ತಿನಿಸು, ಪಾನೀಯ ವ್ಯವಸ್ಥೆ ಮಾಡಿ ಜೂಜಾಡಿಸುವುದು ನಡೆದುಕೊಂಡು ಬಂದಿದೆ. ಇದಕ್ಕೆಂದು ಅವರು ಇಂತಿಷ್ಟು ಹಣ ಪಡೆಯುತ್ತಾರೆ. ಇಸ್ಪೀಟಿನ ಎಲೆಗಳನ್ನು ಆಗಾಗ ಬದಲಿಸಿ ಹೊಸ ಕಟ್ಟು ಕೊಟ್ಟು ಹುರುಪು ತುಂಬುತ್ತಾರೆ! ಮೂರೆಲೆ ಮತ್ತು ರಮ್ಮಿಯಂತಹ ಇಸ್ಪೀಟಾಟವನ್ನು ಹಬ್ಬದ ಸಂಪ್ರದಾಯವೆಂಬಂತೆ 'ಟೈಂ ಪಾಸ್'ಗೋ ಅಥವಾ ಸಣ್ಣ ಮೊತ್ತದ ಹಣ ಗೆಲ್ಲಲು ಆಡುವುದೇನೋ ಸರಿ. ಆದರೆ, ಅಂದರ್ ಬಾಹರ್ ಇಸ್ಪೀಟ್ ಆಟವನ್ನು ಪಕ್ಕಾ 'ಜೂಜು' ಆಗಿಯೇ ಆಡಲಾಗುತ್ತಿರುವುದು ಆತಂಕಕಾರಿ. ಇಲ್ಲಿ ಲಕ್ಷಾಂತರ ರೂಪಾಯಿ ಕೈ ಬದಲಾಗುತ್ತದೆ'' ಎನ್ನುತ್ತಾರೆ ಮಂಡ್ಯದವರಾದ ಕವಿ ಸತೀಶ್ ಜವರೇಗೌಡ (ಸಜಗೌ).

''ನಗರ ಮತ್ತು ಪಟ್ಟಣಗಳಲ್ಲಿ 'ಕ್ಲಬ್'ಗಳಲ್ಲಿ ಈ ಜೂಜಾಟ ಇನ್ನೂ ಹೈಟೆಕ್ ಆಗಿ ನಡೆಯುತ್ತದೆ. ನೆರೆಹೊರೆ ಜಿಲ್ಲೆಗಳಿಂದ ಇಸ್ಪೀಟಾಟ ಆಡಲು ಬರುವವರಿಗೆ ಕೊರತೆಯೇನೂ ಇರುವುದಿಲ್ಲ. ಜೂಜಾಟದಲ್ಲಿ ಹಣ ಗೆದ್ದು ಹೋದವರೂ ಉಂಟು. 'ಸೋತು' ಸುಣ್ಣವಾಗಿ ದುಃಖಿತಪ್ತರಾಗಿ ಕುಡಿದು 'ಚಿತ್' ಆಗಿ ಬಿದ್ದು ಉರುಳಾಡುವವರೂ ಉಂಟು, ಗೋಳಾಡುವವರೂ ಉಂಟು, ಕಿತ್ತಾಡುವವರೂ ಉಂಟು'' ಎಂದು ಹಳ್ಳಿಗಳಲ್ಲಿ ಅವರು ಕಂಡಿದ್ದನ್ನು ಹಂಚಿಕೊಂಡರು.

## ಮನೆಗಳಲ್ಲಿ ಖುಷಿಗೆ

ಹಬ್ಬದಲ್ಲಿ ಕೆಲವು ಮನೆಗಳಲ್ಲಿ ಕುಟುಂಬದವರು ಖುಷಿಗೆ ಇಸ್ಪೀಟ್ ಆಡುವುದೂ ಇದೆ. ಇದು ರಂಜನೆಯ ನೆಲೆಯದ್ದು; ಜೂಜಿನ ನೆಲೆಯದ್ದಲ್ಲ. ಏಕೆಂದರೆ, ಅಲ್ಲಿ ಹಣ ಅಥವಾ ಏನನ್ನೂ ಪಣಕ್ಕೆ ಇಟ್ಟಿರುವುದಿಲ್ಲ. ಇದು ಹೆಚ್ಚಿನ ಹೊತ್ತು ನಡೆಯುವುದೂ ಇಲ್ಲ. ಅದಕ್ಕೆ ಯಾವ ನಿರ್ಬಂಧದ ಅಗತ್ಯವೂ ಇಲ್ಲ. ಆದರೆ, ಹೊರಗಡೆ ನಡೆಯುವಂಥದು, ಯುವಜನರನ್ನು 'ಆತಂಕಕಾರಿ ಚಟ'ಕ್ಕೆ ದೂಡುವಂಥದು ಎನ್ನುವುದು ಪ್ರಜ್ಞಾವಂತರ ಕಳಕಳಿ.

ಇತ್ತೀಚಿನ ದಶಕಗಳಲ್ಲಿ ಯುಗಾದಿಯ ಇಸ್ಪೀಟಾಟ 'ಜೂಜಿನ ವ್ಯಸನ'ವಾಗಿ ಮಾರ್ಪಾಡಾಗಿದೆ. ವರ್ಷವಿಡೀ ಕಷ್ಟಪಟ್ಟು ದುಡಿದ ಹಣವನ್ನೆಲ್ಲಾ ಕೆಲವೇ ನಿಮಿಷಗಳಲ್ಲಿ ಕಳೆದುಕೊಂಡು ಪರಿತಪಿಸುವವರೂ ತುಂಬಾ ಮಂದಿ. ಗಳಿಸೋಕೆ ನಾನಾ ದಿನ, ಕಳೆದುಕೊಳ್ಳೋಕೆ ಕೆಲವೇ ಕ್ಷಣ! ಇದರಲ್ಲಿ ಶ್ರಮಿಕ ವರ್ಗದವರೇ ಹೆಚ್ಚು. ಈ ಜೂಜು ಅನೇಕ ಘೋರ ದುರಂತಗಳಿಗೆ ಮತ್ತು ಅಪರಾಧ ಕೃತ್ಯಗಳಿಗೆ ಕಾರಣವಾಗುತ್ತಿರುವುದು ಕೂಡ ವರದಿಯಾಗುತ್ತಲೇ ಇದೆ.

